ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಕೂಡಲೇ ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ಇದಕ್ಕೆ ೧೭ ಲಕ್ಷ ಚಿಲ್ಲರೆ ಹಣವನ್ನು ಕೊಡಬೇಕಾಗಿದೆ. ಇದೇನೂ ಚಿಕ್ಕ ಕೆಲಸವಲ್ಲ, ಇದು ದೊಡ್ಡ ಕೆಲಸ. ಮಾನ್ಯ ಸದಸ್ಯರು ಇದನ್ನು ಗಮನಿಸಬೇಕು.

ಶ್ರೀ ರಾಮಲಿಂಗ ರೆಡ್ಡಿ.—ಮಾನ್ಯ ಅಧ್ಯಕ್ಷರೇ, ಇದು ರಾಜಾಜಿನಗರದ ಒಂದೇ ಪ್ರಶ್ನೆಯಲ್ಲ. ಇಡೀ, ಬೆಂಗಳೂರು ನಗರದ ಪ್ರಾಬ್ಲಮ್ ಆಗಿದೆ. ನನ್ನ ಕ್ಷೇತ್ರದಲ್ಲಿ ಸುಮಾರು ೫–೬ ವರ್ಷಗಳಿಂದ ಎ.ಇ.ಎಚ್, ಕೊಡದೆ ಇರುವುದರಿಂದ ಜನರು ಬಹಳ ತೊಂದರೆಯನ್ನು ಪಡುತ್ತಿರುತ್ತಾರೆ. ಸೀಮೆ ಎಣ್ಣೆ ಪ್ರಾಬ್ಲಮ್‌ನ ಪ್ರಸ್ತುತ ಪರಿಸ್ಥಿತಿ ತಮಗೆ ತಿಳಿದಿರುತ್ತದೆ. ಆದ್ದರಿಂದ ಅದಷ್ಟು ಜಾಗ್ರತೆ ಬೆಂಗಳೂರು ನಗರದಲ್ಲಿ ಎ.ಇ.ಹೆಚ್.ಗೆ ಬರತಕ್ಕಂಥ ಬೇಡಿಕೆಯ ಬಗ್ಗೆ ಗಮನವನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

(ಉತ್ತರ ಇಲ್ಲ)

ಚುಕ್ಕೆ ಪ್ರಶ್ನೆ ೪೭೦ (೧೪೩೪) ಶ್ರೀ ಎಂ. ನಾರಾಯಣಸ್ವಾಮಿ
ಚುಕ್ಕೆ ಪ್ರಶ್ನೆ ೪೭೧ (೨೨೨) ಶ್ರೀ ಎಂ. ಪಿ. ವೆಂಕಟೇಶ್
ಚುಕ್ಕೆ ಪ್ರಶ್ನೆ ೪೭೨ (೧೫೬೦) ಶ್ರೀ ಸಂಭಾಷ್‌ಜೋಶಿ

} ಮಾನ್ಯ ಸದಸ್ಯರುಗಳು ಗೈರು ಹಾಜರಾಗಿದ್ದಾರೆ

ಸೇಡಂ ತಾಲ್ಲೂಕು ಮಂಥೋಳ ಗ್ರಾಮದ ನೇಕಾರರಿಗೆ ಮಂಜೂರಾದ ಮನೆಗಳ ಬಗ್ಗೆ

೧೮೩೧. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ಗುಲ್ಬರ್ಗ ಜಿಲ್ಲೆ ಸೇಡಂ ತಾಲ್ಲೂಕು ಮಂಥೋಳ ಗ್ರಾಮದ ಕೈಮಗ್ಗ ನೇಕಾರರಿಗೆ ಮಂಜೂರಾದ ಮನೆಗಳನ್ನು ಅಡಿಪಾಯದವರೆಗೆ ತೋಡಿದ್ದು ೭–೮ ವರ್ಷಗಳಿಂದ ಕೆಲಸ ಸ್ಥಗಿತ ಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಇದಕ್ಕಾಗಿ ಖರ್ಚಾದ ಹಣವೆಷ್ಟು ;

(ಇ) ಈ ಕೆಲಸ ಸ್ಥಗಿತಗೊಳ್ಳಲು ಕಾರಣಗಳೇನು ;

(ಈ) ಈ ಕೆಲಸವನ್ನು ಪೂರ್ಣಗೊಳಿಸಿ ಯಾವಾಗ ನೇಕಾರರಿಗೆ ಸೌಲಭ್ಯ ಒದಗಿಸಲಾಗುವುದು ?

ಶ್ರೀಮತಿ ಸುಮಾ ವಸಂತ (ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪ ಸಚಿವೆಯರು).—

(ಅ) ಹೌದು.

(ಆ) ಕೆಲಸ ಸ್ಥಗಿತಗೊಳ್ಳುವ ಮುನ್ನ ಯಾವುದೇ ವೆಚ್ಚವನ್ನು ಭರಿಸಿಲ್ಲ.

(ಇ) ನಿರ್ಮಾಣ ಕಾರ್ಯಕ್ಕಾಗಿ ಪಡೆದ ಭೂಮಿಯು ನಿರ್ಮಾಣಕ್ಕೆ ಸಮರ್ಪಕವಾಗಿರದಿದ್ದುದು, ನಿರ್ಮಾಣ ಕಾರ್ಯ ಮಾಡಬೇಕಾದಂತಹ ಸ್ಥಳದಲ್ಲಿ ಅಡಿಪಾಯವನ್ನು ಭದ್ರಪಡಿಸಲು ಭರಿಸಬೇಕಾದಂತ ಹೆಚ್ಚುವರಿ ವೆಚ್ಚ ಹಾಗೂ ಯಾವ ಸ್ಥಳಗಳಲ್ಲಿ ನಿರ್ಮಾಣ ಕಾರ್ಯ ಪ್ರಾರಂಭವಾಗಿರಲಿಲ್ಲವೋ ಪ್ರಗತಿ ಹೊಂದಿರಲಿಲ್ಲವೋ ಅಂತಹ ಸ್ಥಳಗಳನ್ನು ಕೈ ಬಿಡಲು ಅಕ್ಕೊಟ್ಟರ್ ಲಳರ ಆಪೆಕ್ಸ್ ಮಾನಿಟರಿಂಗ್ ಕಮಿಟಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯ.

(ಈ) ಉದ್ಭವಿಸುವುದಿಲ್ಲ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಚಿವರನ್ನು ಕೇಳುತ್ತಿದ್ದೇನೆ. ಮಂಥೋಳ ಗ್ರಾಮದ ನೇಕಾರರ ಮನೆಗಳ ಕೆಲಸ ಸ್ಥಗಿತಗೊಳ್ಳುವ ಮುನ್ನ ಯಾವ ವೆಚ್ಚವನ್ನು ಭರಿಸಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಈ ಮನೆಗಳನ್ನು ಕಟ್ಟಲು ಭೂಮಿಯನ್ನು ಖರೀದಿಸಿದ್ದಕ್ಕಾಗಿ ವೆಚ್ಚ ಮಾಡಿರಬಹುದಲ್ಲವೇ ? ಅಲ್ಲದೆ ಆ ಭೂಮಿಯಲ್ಲಿ ಅಡಿಪಾಯ ಭದ್ರಪಡಿಸಲು ಹೆಚ್ಚುವರಿ ವೆಚ್ಚಕ್ಕಾಗಿ ಈ ಕೆಲಸವನ್ನು ಕೈಬಿಡಲಾಗಿದೆ ಎಂದು ತಿಳಿಸಿದ್ದಾರೆ. ಅಡಿಪಾಯಕ್ಕಾಗಿ ೪–೫ ಸುತ್ತು ಬಳಿಗೆ ತೋಡಿದರೆ ಅಡಿಪಾಯ ಭದ್ರವಾಗಿರುತ್ತದೆಂದು ನನ್ನ ಅಭಿಪ್ರಾಯ. ಇದನ್ನು ಪುನಃ ಪರಿಶೀಲನೆ ಮಾಡಬೇಕೆಂದು ನನ್ನ ಅಭಿಪ್ರಾಯ ಇಲ್ಲದಿದ್ದರೆ ಬೇರೆ ಸ್ಥಳಾವಕಾಶ ಮಾಡುತ್ತೇವೆ. ಆದಕ್ಕಾಗಿ ಆ ಬಡನೇಕಾರರಿಗೆ ಮನೆಗಳನ್ನು ಕಟ್ಟಿಕೊಡುವ ಕೆಲಸವನ್ನು ಕೈಗೆ ಎತ್ತಿಕೊಳ್ಳಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಯಾವುದೇ ಇದನ್ನು ಪುನರ್‌ಪರಿಶೀಲನೆ ಮಾಡಿ ಬಡ ನೇಕಾರರಿಗೆ ಸಹಾಯ ಮಾಡಬೇಕೆಂದು ಹೇಳಿದ್ದಾರೆ, ನಾನು ಅದನ್ನು ಪುನರ್ ಪರಿಶೀಲನೆ ಮಾಡಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಸನ್ಮಾನ್ಯ ಸಚಿವರಾದ ಸುಪ್ರಾವಸಂತ್ ರವರಿಗೆ ಸಂಬಂಧಪಟ್ಟದ್ದು. ಆದರೆ ಮಾನ್ಯ ಯಾಹ್ಯಾರವರು ಉತ್ತರವನ್ನು ಕೊಡುತ್ತಿದ್ದಾರೆ.

SRI S. M. YAHYA.—I don't thenk it is a technical point.

ಮೈಸೂರು ಜಿಲ್ಲೆಯಲ್ಲಿ ಕೈಗಾರಿಕೆಗಳ ಬಗ್ಗೆ.

೧೫೨೧. ಶ್ರೀ ಹರ್ಷಕುಮಾರ್‌ಗೌಡ (ಚಾಮರಾಜ).—ಮಾನ್ಯ ಕೈಗಾರಿಕೆ, ಇಂಧನ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಮೈಸೂರು ನಗರದ ಸುತ್ತಮುತ್ತಲಿರುವ ದೊಡ್ಡ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳೆಷ್ಟು ?

ಆ) ಮೈಸೂರು ಜಿಲ್ಲೆಯಲ್ಲಿ ನೂತನ ಉದ್ದಿಮೆಗಳ ಪ್ರಾರಂಭಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಇ) ಇದರಿಂದ ಎಷ್ಟು ಜನರಿಗೆ ಉದ್ಯೋಗಾವಕಾಶ ದೊರೆತಿದೆ

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕಾ ಮಂತ್ರಿಗಳು).—

ಅ) ದೊಡ್ಡ ಪ್ರಮಾಣದ ಕೈಗಾರಿಕೆಗಳು ... ೬೫
ಸಣ್ಣ ಪ್ರಮಾಣದ ಕೈಗಾರಿಕೆಗಳು ... ೯೯೧

ಆ) ಕೈಗಾರಿಕೆಗಳ ಅಭಿವೃದ್ಧಿಗಾಗಿ, ರಾಜ್ಯ ಸರ್ಕಾರವು ರಾಜ್ಯದಲ್ಲಿರುವ ತಾಲ್ಲೂಕ್‌ಗಳನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಿದ್ದು, ಮೈಸೂರು ಜಿಲ್ಲೆಯ ಕೊಳ್ಳೇಗಾಲ, ಕೃಷ್ಣರಾಜನಗರ, ಮತ್ತು ಹುಣಸೂರು ತಾಲ್ಲೂಕುಗಳನ್ನು ೨ನೇ ವಿಭಾಗದಲ್ಲಿ ಬರುವಂತೆಯೂ ಮತ್ತು ಗುಂಡ್ಲುಪೇಟೆ, ಪಿರಿಯಾಪಟ್ಟಣ, ಹೆಗ್ಗಡದೇವನಕೋಟೆ, ಟಿ. ನರಸೀಪುರ, ಯಳಂದೂರು ಮತ್ತು ಚಾಮರಾಜನಗರ ತಾಲ್ಲೂಕುಗಳನ್ನು ೩ನೇ ವಿಭಾಗದಲ್ಲಿ ತರಲಾಗಿದೆ.

೨ ಮತ್ತು ೩ನೇ ವಿಭಾಗದಲ್ಲಿ ಬರುವ ಕೈಗಾರಿಕೆಗಳಿಗೆ ಸ್ಥಿರ ಆಸ್ತಿಯ ಮೇಲೆ ಶೇಕಡಾ ೧೫ ರಿಂದ ೨೦ ಭಾಗದಷ್ಟು ಸಹಾಯಧನ, ಮೂಲಧನ ತೆರಿಗೆ ವಿನಾಯಿತಿ, ಸ್ಟ್ಯಾಂಪು ಶುಲ್ಕ ವಿನಾಯಿತಿಗಳನ್ನು ಮಂಜೂರು ಮಾಡಲಾಗುವುದು. ಹಾಗೂ ಈ ವಿಭಾಗದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವವರು, ಪರಿಶಿಷ್ಟಜಾತಿ ಮತ್ತು ಪಂಗಡ, ಮಹಿಳೆಯರು ಅಥವಾ ಅಂಗವಿಕಲರಾಗಿದ್ದರೆ ಅಂತಹವರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗುವುದು.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತವು ನಂಜನಗೂಡು, ಯಾದವಗಿರಿ, ಮತ್ತು ಹೆಬ್ಬಾಳ ಕೈಗಾರಿಕಾ ವಸಾಹತು ಪ್ರದೇಶಗಳಲ್ಲಿ ಶೆಡ್ಡುಗಳನ್ನು ನಿರ್ಮಿಸಲು ಯೋಜನೆ ಹಮ್ಮಿಕೊಂಡಿದೆ. ಮತ್ತು ಹೆಗ್ಗಡದೇವನಕೋಟೆ ಕೃಷ್ಣರಾಜನಗರ ಗುಂಡ್ಲುಪೇಟೆ, ಟಿ. ನರಸೀಪುರ, ಯಳಂದೂರು, ಮತ್ತು ಚಾಮರಾಜನಗರಗಳಲ್ಲಿ ಶೆಡ್ಡುಗಳ ನಿರ್ಮಾಣಕ್ಕಾಗಿ ಭೂಮಿಯನ್ನು ಗುರುತಿಸಲಾಗುತ್ತಿದೆ.

೩೫೦ ಎಕರೆ ಜಮೀನನ್ನು ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಎಲೆಕ್ಟ್ರಾನಿಕ್ ಸೀಟ್‌ಗಾಗಿ ಮೈಸೂರಿನಲ್ಲಿ ಕಾಯ್ದಿರಿಸಲಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸುಮಾರು ೩೨೦೦ ಎಕರೆಗಳಷ್ಟು ಜಮೀನನ್ನು ಜಿಲ್ಲೆಯಲ್ಲಿ ಸ್ವಾಧೀನಪಡಿಸಿಕೊಂಡಿದ್ದು ಅವುಗಳನ್ನು ಅಭಿವೃದ್ಧಿ ಪಡಿಸಿ ಕೈಗಾರಿಕೊದ್ಯಮಿಗಳಿಗೆ ಹಂಚಲಾಗುತ್ತಿದೆ.

ಇ) ಸುಮಾರು ೬೭,೦೦೦ ಮಂದಿಗೆ ಉದ್ಯೋಗ ಅವಕಾಶ ದೊರಕಿದೆ.

ಶ್ರೀ ಹರ್ಷಕುಮಾರ್‌ಗೌಡ.—ಸನ್ಮಾನ್ಯ ಅಧ್ಯಕ್ಷರೇ ಈಗ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಕೊನೆಯ ಪ್ರಶ್ನೆ ಇ. ಯಲ್ಲಿ ಇದರಿಂದ ಎಷ್ಟು ಜನರಿಗೆ ಉದ್ಯೋಗಾವಕಾಶ